1	2	3	4	5	6
14	Basapura lift	2276	0	0.60	0.00
15	F.C. to Ranikere	3238	283	1.50	0.00
16	Gandhorinala	8094	0	2.16	0.00
17	Hirehalla	8013	0	2.27	0.00
18	Hodirayanhalla	0	0	0.00	0.00
19	Lower Mullamari	9713	605	3.08	0.19
20	Maskinala	2833	0	0.78	0.00
21	Itagi Sasalvad lift	5700	0	0.55	0.00
22	Upper Mullamari	3279	3279	1.24	1.24
	Total - I (B):	**1719761**	**943359**	**484.00**	**300.36**
C	**NEW PROJECTS**				
	MAJOR PROJECT				
1	Markendeya	32375	0	4.00	0.00
2	Ramthala Lift	22260	0	4.50	0.00
3.	Singatlur	20241	0	7.64	0.00
	MEDIUM PROJECT				
4	Harinala	4370	0	0.80	0.00
	Total-I (C):	**79246**	**0**	**16.94**	**0.00**
	Total Maj & Med:	**2061911**	**1206263**	**609.17**	**408.59**

ಇಲಾಖೆಗಳಲ್ಲಿ ಮೇಲ್ವಿಚಾರಣೆ ಸಿಬ್ಬಂದಿ ಸರಿಯಾಗಿ ಕೆಲಸ ಮಾಡದೆ ಸಾರ್ವಜನಿಕರಿಗೆ ತೊಂದರೆ

771 - ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮೇಲ್ವಿಚಾರಣಾ ಸಿಬ್ಬಂದಿಯು (ಸೂಪರ್ ವೈಸರಿ ಸ್ಟಾಪ್) ಸಕಾಲಿಕ ಅಭಿಪ್ರಾಯ ನೀಡದೆ ತೀರ್ಮಾನ ತೆಗೆದುಕೊಳ್ಳದೆ ಜನಸಾಮಾನ್ಯರ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಕರಣಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) *ಈ ರೀತಿ ವಿಳಂಬವಾಗುತ್ತಿರುವುದಕ್ಕೆ ಮೇಲ್ವಿಚಾರಣಾ ಸಿಬ್ಬಂದಿಯ ಆಡಳಿತ ಜ್ಞಾನದ ಮಟ್ಟ ಕಾರಣವೇ ಅಥವಾ ಜನಸಾಮಾನ್ಯರ ಬಗ್ಗೆ ಬೇಜವಾಬ್ದಾರಿ ನಿರ್ಲಕ್ಷ್ಯ ಕಾರಣವೇ?*

ಆ) *ಇಂತಹ ಸಿಬ್ಬಂದಿ ಆಡಳಿತದಲ್ಲಿ ಕಂಪ್ಯೂಟರ್ ಬಳಸಿ ಜನರ ಸಮಸ್ಯೆಗಳಿಗೆ ಎಷ್ಟರಮಟ್ಟಿಗೆ ಸ್ಪಂದಿಸಲು ಸಾಧ್ಯ (ವಿವರ ನೀಡುವುದು)*

ಈ) *ಇಂತಹ ಸಿಬ್ಬಂದಿಯಿಂದ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆಗೆ ಸರ್ಕಾರದಲ್ಲಿ ಪರಿಹಾರವಿಲ್ಲವೆ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಸಾರ್ವಜನಿಕ ದೂರುಗಳನ್ನು ಮತ್ತು ಅವರ ಬೇಡಿಕೆಗಳನ್ನು ಸಕಾಲದಲ್ಲಿ ಪರಿಗಣಿಸಿ ಅದರ ಬಗ್ಗೆ ನಿಯಮಗಳನ್ವಯ ತೀರ್ಮಾನಗಳನ್ನು ಕೈಗೊಂಡು ಬೇಡಿಕೆಗಳನ್ನು ಇತ್ಯರ್ಥ ಪಡಿಸಲು ಸಂಬಂಧಪಟ್ಟ ಅರ್ಜಿದಾರರಿಗೆ ಉತ್ತರಗಳನ್ನು ನೀಡಬೇಕೆಂದು ಸರ್ಕಾರದಿಂದ ವಿವಿಧ ಇಲಾಖೆಗಳಿಗೆ ಮಾರ್ಗ ಸೂಚಿಗಳನ್ನು ನೀಡಲಾಗಿದೆ. ಕಛೇರಿ ಕಾರ್ಯ ವಿಧಾನದಲ್ಲಿ ಸಹ ಸಾರ್ವಜನಿಕರ ಬೇಡಿಕೆಗಳನ್ನು ಆದ್ಯತೆ ಮೇಲೆ ಪರಿಗಣಿಸಲು ನಿಯಮಗಳನ್ನು ಸಹ ರೂಪಿಸಲಾಗಿರುತ್ತದೆ. ಬಾಕಿ ಇರುವ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸಲು ಹಾಗೂ ಬಾಕಿ ಇರುವ ಪ್ರಕರಣಗಳ ಬಗ್ಗೆ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಿಂದ ಪ್ರತಿ ಮಾಹೆ ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸಲು ಸರ್ಕಾರದ ಅಧಿಕೃತ ಜ್ಞಾಪನ ಸಂ. ಡಿಪಿಎಆರ್ 17 ಎಎಆರ್ 93 ದಿ. 4.6.93 ರಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಇದಲ್ಲದೇ ಸಚಿವ ಸಂಪುಟ ಮಟ್ಟದಲ್ಲಿ ಸಹ ಇಲಾಖೆಗಳಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಪರಿವೀಕ್ಷಣೆ ಮಾಡಲಾಗುತ್ತದೆ.

ಆ) ಸಾರ್ವಜನಿಕ ಕುಂದು ಕೊರತೆಗಳು ಹಾಗೂ ಅವರ ಸಮಸ್ಯೆಗಳನ್ನು ದಕ್ಷತೆಯಿಂದ ಬಗೆಹರಿಸಲು ಎಲ್ಲಾ ಸಿಬ್ಬಂದಿಯವರಿಗೆ ಮಾರ್ಗ ಸೂಚಿಗಳನ್ನು ನೀಡಲಾಗಿರುತ್ತದೆ. ಯಾವ ಸಿಬ್ಬಂದಿ ಮತ್ತು ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳನ್ನು ಬೇಜವಾಬ್ದಾರಿತನ ತೋರಿದ್ದು ಸರ್ಕಾರದ ಗಮನಕ್ಕೆ ಬಂದಲ್ಲಿ ಅಂತವರ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಇ) ಸರ್ಕಾರದ ಕೆಲಸಗಳನ್ನು ತುರ್ತಾಗಿ ನಿರ್ವಹಿಸಲು ಮತ್ತು ಇದಕ್ಕೆ ಸಂಬಂಧಿಸಿದ ವಿವಿಧ ಮಾಹಿತಿಗಳನ್ನು ಸಂಗ್ರಹಿಸಲು ಅನುಕೂಲವಾಗಲು ಕೆಲವು ಇಲಾಖೆಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ.

ಈ) ಸಾರ್ವಜನಿಕ ಕುಂದು ಕೊರತೆಗಳನ್ನು ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರಿಗೆ ತೊಂದರೆಯಾಗದೇ ಕೆಲಸಗಳನ್ನು ನಿರ್ವಹಿಸಲು ತಾಲ್ಲೂಕು ಮಟ್ಟದಲ್ಲಿ ಉಪ ವಿಭಾಗಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಇಲಾಖಾ ಮುಖ್ಯಸ್ಥರ ಮಟ್ಟದಲ್ಲಿ ಹಾಗೂ ಸಚಿವಾಲಯದ ಮಟ್ಟದಲ್ಲಿ ಪ್ರತ್ಯೇಕವಾಗಿ ಸಾರ್ವಜನಿಕ ಕುಂದುಕೊರತೆ ನಿವಾರಣಾಧಿಕಾರಿಗಳನ್ನು ನಾಮ ನಿರ್ದೇಶನ ಮಾಡಲಾಗಿರುತ್ತದೆ.